ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**202**
ಸದಸ್ಯರ ಹೆಸರು	:	ಶ್ರೀ ಮಹಾಂತೇಶ್ ಮ.ಕವಟಗಿಮಠ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	18-07-2019
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿ

****

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪ್ರತಿ ವರ್ಷ ಎಷ್ಟು ಮೆಗಾವ್ಯಾಟ್ ವಿದ್ಯುತ್ತಿನ ಬೇಡಿಕೆ ಇದೆ;	ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ದಿನವಹಿ ಸರಾಸರಿ ವಿದ್ಯುತ್ತಿನ ಬೇಡಿಕೆಯ ಈ ಕೆಳಕಂಡಂತಿರುತ್ತದೆ.

ವರ್ಷ	ವಿದ್ಯುತ್ತಿನ ಬೇಡಿಕೆ (ಮಿಲಿಯನ್ ಯೂನಿಟ್‌ಗಳಲ್ಲಿ)
2016-17	126 ರಿಂದ 228
2017-18	114 ರಿಂದ 243
2018-19	138 ರಿಂದ 259
2019-20	182 ರಿಂದ 260 (ಎಲ್.ಜಿ.ಬಿ.ಆರ್ ಪ್ರೊಜೆಕ್ಷನ್)

	ಪ್ರಶ್ನೆ	ಉತ್ತರ
ಆ)	ರಾಜ್ಯದಲ್ಲಿ ವಿವಿಧ ಮೂಲಗಳಿಂದ ಎಷ್ಟು ಮೆಗಾ ವ್ಯಾಟ್ ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ; (ವರ್ಗವಾರು ವಿವರ ನೀಡುವುದು)	2019 ನೇ ಸಾಲಿನ ಜೂನ್ ತಿಂಗಳಿನಲ್ಲಿ ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ ಪ್ರಮಾಣದ ವಿವರಗಳು ಕೆಳಕಂಡಂತಿವೆ.

ಕ್ರ ಸಂ	ವಿದ್ಯುತ್ತಿನ ಮೂಲಗಳು	ಜೂನ್-19 ರ ತಿಂಗಳಿನಲ್ಲಿ ಲಭ್ಯವಾದ ವಿದ್ಯುತ್ ಪ್ರಮಾಣ ಮಿಲಿಯನ್ ಯೂನಿಟ್ ಗಳಲ್ಲಿ (ತಾತ್ಕಾಲಿಕ)
1	ಜಲವಿದ್ಯುತ್	581.8
2	ಶಾಖೋತ್ಪನ್ನ	965.2
3	ಪವನ ವಿದ್ಯುತ್ ಸೌರಶಕ್ತಿ, ಹಾಗು ಇತರೆ ಅಸಂಪ್ರದಾಯಿಕ ಮೂಲಗಳಿಂದ	2080.7
4	ಬೃಹತ್ ಐಪಿಪಿ	257.2
5	ಇತರೆ	5491.3
	ಒಟ್ಟು	**5872.1**

ಜೂನ್ 2019 ರ ಮಾಹೆಯಲ್ಲಿ ದೈನಂದಿನ ಸರಾಸರಿ ವಿದ್ಯುತ್ ಬೇಡಿಕೆ ಪ್ರಮಾಣವು 196 ಮಿ.ಯೂ.ಗಳಾಗಿದ್ದು, ಬೇಡಿಕೆ ಪ್ರಮಾಣದಷ್ಟು ವಿದ್ಯುತ್ತನ್ನು ವಿವಿಧ ಮೂಲಗಳಿಂದ ಉತ್ಪಾದಿಸಿ ಪೂರೈಸಲಾಗಿರುತ್ತದೆ.

	ಪ್ರಶ್ನೆ	ಉತ್ತರ
ಇ)	ಬೇಡಿಕೆ ಮತ್ತು ಸರಬರಾಜಿನ ಮಧ್ಯ ಇರುವ ಕೊರತೆಯನ್ನು ಯಾವ ಮೂಲಗಳಿಂದ ತುಂಬಲಾಗುತ್ತಿದೆ;	ಪ್ರಸ್ತುತ, ರಾಜ್ಯದಲ್ಲಿ ಬೇಡಿಕೆಗೆ ತಕ್ಕಂತೆ ವಿದ್ಯುತ್ ಪೂರೈಕೆಯಾಗುತ್ತಿದ್ದು, ಕೊರತೆಯು ಇರುವುದಿಲ್ಲ. ಒಂದು ವೇಳೆ ವಿದ್ಯುತ್ ಕೊರತೆ ಉಂಟಾದಲ್ಲಿ, ತಾತ್ಕಾಲಿಕ ಕೊರತೆಯನ್ನು ನೀಗಿಸಲು ಎಸ್ಕಾಂಗಳು ಕೋರಿಕೆಯನ್ನು ಸಲ್ಲಿಸಿದ ನಂತರ, ವಿದ್ಯುತ್ತನ್ನು ಎನರ್ಜಿ ಎಕ್ಸ್ ಚೇಂಜ್ ಮುಖಾಂತರ ದಿನವಹಿ ಅವಶ್ಯಕತೆಯ ಆಧಾರದ ಮೇಲೆ ವಿದ್ಯುತ್ ಖರೀದಿ ಮಾಡಲಾಗುತ್ತದೆ.
ಈ)	ಸರ್ಕಾರವು ಈ ಕೊರತೆಯನ್ನು ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನೆಗೆ ಹೆಚ್ಚು ಒತ್ತು ಕೊಡುವ ನಿಟ್ಟಿನ ತೆಗೆದುಕೊಂಡ ಕ್ರಮಗಳೇನು;	ರಾಜ್ಯದಲ್ಲಿ ಸೋಲಾರ್‌ನಿಂದ ವಿದ್ಯುತ್ ಉತ್ಪಾದನೆಗೆ ಸರ್ಕಾರ ಉತ್ತೇಜನ ನೀಡುತ್ತಿದ್ದು, ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. • ಕರ್ನಾಟಕ ಸರ್ಕಾರವು ದಿನಾಂಕ 22-05-2014 ರಿಂದ ಕರ್ನಾಟಕ ಸರ್ಕಾರದ ಸೌರನೀತಿ 2014-21 ನ್ನು ಜಾರಿಗೆ ತಂದಿರುತ್ತದೆ.

...2)

		• ವಿದ್ಯುತ್ ಸರಬರಾಜು ಕಂಪನಿಗಳ ಗ್ರಾಹಕರು ತಮ್ಮ ಸ್ಥಾವರದಲ್ಲಿ ಸೌರ ಶಕ್ತಿ ಮೇಲ್ಛಾವಣಿ ಘಟಕಗಳನ್ನು ಅಳವಡಿಸಿ ಕೊಳ್ಳಬಹುದಾಗಿರುತ್ತದೆ. ಸದರಿ ಘಟಕಗಳಿಂದ ಗ್ರಾಹಕರು ಉತ್ಪಾದಿಸುವ ಸೌರಶಕ್ತಿ ವಿದ್ಯುತ್ ಉತ್ಪಾದನೆಯು ತಾವು ಗ್ರಿಡ್‌ನಿಂದ ಪಡೆದ ವಿದ್ಯುಚ್ಛಕ್ತಿಗಿಂತ ಹೆಚ್ಚುವರಿಯಾಗಿದ್ದು ಗ್ರಿಡ್‌ಗೆ ಪೂರೈಸಿದ್ದಲ್ಲಿ, ವಿದ್ಯುತ್ ಖರೀದಿ ಒಪ್ಪಂದ ಕೈಗೊಂಡ ಸ್ಥಾವರಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು ಕಾಲಕಾಲಕ್ಕೆ ನಿಗದಿಪಡಿಸುವ ವಿದ್ಯುತ್ ದರದಂತೆ ಗ್ರಾಹಕರಿಗೆ ಹಣ ಪಾವತಿಸಲಾಗುವುದು. • ಭೂಮಾಲೀಕತ್ವವುಳ್ಳ ರೈತರಿಗೆ 1-3 ಮೆ.ವ್ಯಾ. ಸೋಲಾರ್ ಯೋಜನೆಯಡಿ ರೈತರಿಗೆ ಅನುಕೂಲವಾಗಲು 1 ರಿಂದ 3 ಮೆ.ವ್ಯಾ ಸೋಲಾರ್ ಘಟಕಗಳನ್ನು ಅಳವಡಿಸಿಕೊಳ್ಳಲು ಕ್ರೆಡಲ್ ನಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. • ಸೌರಶಕ್ತಿ ಮೇಲ್ಛಾವಣಿ ವಿದ್ಯುತ್ ಘಟಕಗಳನ್ನು ಅಳವಡಿಸಿಕೊಳ್ಳಲು ಕೇಂದ್ರ ಸರ್ಕಾರದ ಎಂ.ಎನ್.ಆರ್.ಇ ವತಿಯಿಂದ ಸಬ್ಸಿಡಿಯನ್ನು ನೀಡಲಾಗುವುದು. • ನವೀಕರಿಸಬಹುದಾದ ಇಂಧನ ಅಭಿವೃದ್ಧಿಗಾಗಿ 13ನೇ ಹಣಕಾಸು ಯೋಜನೆಯಡಿ ಕೇಂದ್ರ ಸರ್ಕಾರದ ಅನುದಾನದಡಿ ಸರ್ಕಾರಿ ಕಟ್ಟಡಗಳ ಮೇಲೆ ಸೋಲಾರ್ ಪಿ.ವಿ. ಮೇಲ್ಛಾವಣಿ ಘಟಕಗಳನ್ನು ಅಳವಡಿಸಲಾಗುತ್ತಿದೆ. • ಕೇಂದ್ರ ಸರಕಾರದ ಐ.ಪಿ.ಡಿ.ಎಸ್ ಯೋಜನೆಯಡಿ ಆಯ್ದ ಸಂಖ್ಯೆಯ ಸರ್ಕಾರಿ ಕಛೇರಿ/ಕಟ್ಟಡಗಳ ಮೇಲ್ಛಾವಣಿಯಲ್ಲಿ ಸೌರಶಕ್ತಿ ಘಟಕಗಳನ್ನು ಅಳವಡಿಸಲಾಗುತ್ತಿದೆ. • ಕರ್ನಾಟಕ ಸರ್ಕಾರವು ರೈತರ ಕಲ್ಯಾಣಕ್ಕಾಗಿ "ಸೂರ್ಯರೈತ" ಜಾಲ ಸಂಪರ್ಕಿತ ಯೋಜನೆಯನ್ನು ದಿನಾಂಕ:20.09.2014 ರಂದು ಆದೇಶ ಹೊರಡಿಸಿರುತ್ತದೆ. • ಕರ್ನಾಟಕ ಸರ್ಕಾರವು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕೆ.ಆರ್.ಇ.ಡಿ.ಎಲ್.) ಮೂಲಕ ರೈತರ ಕಲ್ಯಾಣಕ್ಕಾಗಿ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸುವ ಯೋಜನೆಯು ಚಾಲ್ತಿಯಲ್ಲಿರುತ್ತದೆ. **ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ:-** ಕರ್ನಾಟಕ ಸರ್ಕಾರವು ಸೌರ ನೀತಿ 2014-21 ಜಾರಿಗೆ ತಂದಿದ್ದು ಸೌರ ವಿದ್ಯುತ್ ಘಟಕಗಳಿಂದ 2020-21 ನೇ ಇಸವಿಯೊಳಗಡೆ ಕನಿಷ್ಠ 8% ಸೋಲಾರ್ RPO ಗುರಿಯನ್ನು ತಲುಪುವ ನಿಟ್ಟಿನಲ್ಲಿ **6000** ಮೆ.ವ್ಯಾನಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿ ಗುರಿಯನ್ನು ಹೊಂದಿರುತ್ತದೆ. ಸದರಿ ಸೋಲಾರ್ RPO ವರ್ಗವನ್ನು ಒಳಗೊಂಡು ಸೌರ ನೀತಿಯಲ್ಲಿ ವಿವಿಧ ವರ್ಗಗಳಡಿ ಸ್ವಬಳಕೆ, ಮೂರನೇ ವ್ಯಕ್ತಿ ಮಾರಾಟ ಹಾಗೂ ಖಾಸಗಿ ಸೋಲಾರ್ ಪಾರ್ಕ್ ವರ್ಗದಡಿ ಸೌರ ಘಟಕಗಳನ್ನು ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ನಿಗದಿಪಡಿಸಿದ ಸೋಲಾರ್ ಖಕಿಔ ಗುರಿಯನ್ನು ತಲುಪುವ ನಿಟ್ಟಿನಲ್ಲಿ ಈ ವರೆಗೆ **5864** ಮೆ.ವ್ಯಾನಷ್ಟು ಸೌರ ಯೋಜನೆಗಳನ್ನು ಹಂಚಿಕೆ ಮಾಡಲಾಗಿದೆ. ಇದರಲ್ಲಿ 2050 ಮೆ.ವ್ಯಾ ಸಾಮರ್ಥ್ಯದ ಪಾವಗಡ ಸೋಲಾರ್ ಪಾರ್ಕ್‌ನಲ್ಲಿನ 1850 ಮೆ.ವ್ಯಾ, 970 ಮೆ.ವ್ಯಾ ಸಾಮರ್ಥ್ಯದ SECI ಯೋಜನೆ, ಜೆ.ಎನ್.ಎನ್.ಎಸ್.ಎಂ ನ 35 ಮೆ.ವ್ಯಾ ಸಾಮರ್ಥ್ಯದ ಘಟಕಗಳು ಸೇರಿರುತ್ತವೆ. ಜೂನ್-2019 ರ ಅಂತ್ಯಕ್ಕೆ ಸದರಿ ವರ್ಗದಡಿ 183.32 ಮೆ.ವ್ಯಾ ನಷ್ಟು ಸೋಲಾರ್ ಮೇಲ್ಛಾವಣಿ ಯೋಜನೆಗಳನ್ನು ಒಳಗೊಂಡು ಒಟ್ಟು 4628 ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳು ಅನುಷ್ಠಾನಗೊಂಡಿರುತ್ತವೆ. ಮುಂದುವರೆದು, ಸ್ವಬಳಕೆ, ಮೂರನೇ ವ್ಯಕ್ತಿ ಮಾರಾಟ ಹಾಗೂ ಖಾಸಗಿ ಸೋಲಾರ್ ಪಾರ್ಕ್ ವರ್ಗದಡಿ 3080 ಮೆ.ವ್ಯಾ ನಷ್ಟು ಸೌರ ಘಟಕಗಳನ್ನು ಹಂಚಿಕೆ ಮಾಡಲಾಗಿದ್ದು. ಇವುಗಳಲ್ಲಿ 1499 ಮೆ.ವ್ಯಾನಷ್ಟು ಯೋಜನೆಗಳು ಅನುಷ್ಠಾನಗೊಂಡಿರುತ್ತವೆ. ರಾಜ್ಯದಲ್ಲಿ ವಿವಿಧ ವರ್ಗಗಳಡಿ 8597 ಮೆ.ವ್ಯಾ ನಷ್ಟು ಸೌರ ಘಟಕಗಳನ್ನು ಹಂಚಿಕೆ ಮಾಡಲಾಗಿದ್ದು, ಇದುವರವಿಗೂ ಒಟ್ಟು 6146 ಮೆ.ವ್ಯಾ ನಷ್ಟು ಸಾಮರ್ಥ್ಯದ ಸೌರ ಘಟಕಗಳು ಅನುಷ್ಠಾನಗೊಂಡಿರುತ್ತವೆ.
ಉ)	ಸಾರ್ವಜನಿಕರು ತಮ್ಮ ತಮ್ಮ ಮನೆಗಳ ಮೇಲೆ ವಿದ್ಯುತ್ ಪೆನಲ್ ಗಳನ್ನು ಅಳವಡಿಸಿ ಅವುಗಳ ಮುಖಾಂತರ ತಮ್ಮ ಮನೆಗಳಿಗೆ ಬೇಕಾದಂತಹ ವಿದ್ಯುತ್ತನ್ನು ತಾವೇ	ವಸತಿ ಗೃಹಗಳು/ ವಾಣಿಜ್ಯ ಕೇಂದ್ರಗಳ/ ಶಿಕ್ಷಣ ಸಂಸ್ಥೆಗಳ/ ಕೈಗಾರಿಕೆಗಳಲ್ಲಿನ ಛಾವಣಿಯ ಮೇಲೆ ಸೌರ ವಿದ್ಯುತ್ ಉತ್ಪಾದನಾ ಫಲಕಗಳನ್ನು ಸ್ಥಾಪಿಸಿ ಅದರ ಮೂಲಕ ವಿದ್ಯುತ್ತನ್ನು ಉತ್ಪಾದಿಸುವ ಯೋಜನೆಯನ್ನು ದಿನಾಂಕ: 07-11-2014 ರಂದು ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಜಾರಿಗೊಳಿಸಲಾಗಿದೆ. ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಗ್ರಾಹಕರು ತಮ್ಮ ಸ್ಥಾವರದಲ್ಲಿ ಅಳವಡಿಸಿರುವ ಸೌರ ಶಕ್ತಿ ಮೇಲ್ಛಾವಣಿ ಘಟಕಗಳಿಂದ ಉತ್ಪಾದಿಸುವ ಸೌರಶಕ್ತಿ ವಿದ್ಯುತ್ ಉತ್ಪಾದನೆಯು, ತಾವು ಗ್ರಿಡ್‌ನಿಂದ ಪಡೆದ ವಿದ್ಯುಚ್ಛಕ್ತಿಗಿಂತ ಹೆಚ್ಚುವರಿಯಾಗಿದ್ದು, ರಾಜ್ಯದ ವಿದ್ಯುತ್ ಜಾಲಕ್ಕೆ ಪೂರೈಸಿದ್ದಲ್ಲಿ,

ಉತ್ಪಾದಿಸುವುದರೊಂದಿಗೆ ಹೆಚ್ಚಿನ ವಿದ್ಯುತ್ತನ್ನು ಸರ್ಕಾರದ ವಿದ್ಯುತ್ ಜಾಲಕ್ಕೆ ವರ್ಗಾವಣೆ ಮಾಡಲು ಸರ್ಕಾರವು ಹೊಸ ಯೋಜನೆಗಳೇನಾದರೂ ರೂಪಿಸಿದೆಯೇ; ಹಾಗಿದ್ದಲ್ಲಿ, ವಿವರ ನೀಡುವುದು?

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ ಆದೇಶ ಸಂಖ್ಯೆ: S/03/1 ದಿನಾಂಕ : 10-10-2013 ರಂತೆ, ದಿನಾಂಕ: 02-05-2016 ಕ್ಕಿಂತ ಮುಂಚೆ ವಿದ್ಯುತ್ ಖರೀದಿ ಒಪ್ಪಂದ ಕೈಗೊಂಡ ಸ್ಥಾವರಗಳಿಂದ ಉತ್ಪಾದಿಸುವ ವಿದ್ಯುತ್‌ನ ಪ್ರತಿ ಯೂನಿಟ್‌ಗೆ, ಕೇಂದ್ರ ಸರ್ಕಾರದ ಅನುದಾನ ಪಡೆಯದ ಸ್ಥಾವರಗಳಿಗೆ ರೂ.9.56/- ರಂತೆ ಮತ್ತು ಅನುದಾನ ಪಡೆದುಕೊಂಡಿರುವ ಸ್ಥಾವರಗಳಿಗೆ ಪ್ರತಿ ಯೂನಿಟ್‌ಗೆ ರೂ.7.20/- ರಂತೆ ಪಾವತಿಸಲಾಗುತ್ತಿದೆ.

ದಿನಾಂಕ: 02-05-2016 ರ ನಂತರ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳಲಾದ ಮೇಲ್ಛಾವಣಿ ಸೌರ ವಿದ್ಯುತ್ ಘಟಕಗಳಿಂದ ಈ ಕೆಳಕಂಡ ದರಗಳಲ್ಲಿ ವಿದ್ಯುತ್ ಖರೀದಿಸಲಾಗುತ್ತಿದೆ.

ಸಾಮರ್ಥ್ಯ	ದರಗಳು ರೂ/ಯೂನಿಟ್‌ಗೆ (ಸಬ್ಸಿಡಿ ರಹಿತ ಸ್ಥಾವರಗಳಿಗೆ)	ದರಗಳು ರೂ/ ಯೂನಿಟ್‌ಗೆ (ಸಬ್ಸಿಡಿ ಸಹಿತ ಸ್ಥಾವರಗಳಿಗೆ)
1 - 10 ಕಿ.ವ್ಯಾ	7.08	6.03
10 - 50 ಕಿ.ವ್ಯಾ	6.61	5.63
50 - 100 ಕಿ.ವ್ಯಾ	6.14	5.23
100 - 500 ಕಿ.ವ್ಯಾ	5.67	4.83
500 - 1000 ಕಿ.ವ್ಯಾ	5.20	4.43

ದಿನಾಂಕ: 15-09-2017 ರಂದು ಕೆಇಆರ್‌ಸಿಯಿಂದ ನೀಡಿರುವ ಜಕಾತಿ ಆದೇಶದಂತೆ ಬಹುಮಹಡಿಗಳ ಕಟ್ಟಡಗಳಲ್ಲಿ ಅಳವಡಿಸುವ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಸೌರಶಕ್ತಿ ಮೇಲ್ಛಾವಣಿ ಘಟಕಗಳಿಗೆ ಪ್ರತಿ ಯೂನಿಟ್‌ಗೆ APPC(Average Pooled Power Purchase Cost) ದರಗಳು ಅಥವಾ ರೂ.4.00/- ಇವುಗಳಲ್ಲಿ ಯಾವುದು ಕಡಿಮೆಯೋ ಆ ದರವನ್ನು ನಿಗದಿಪಡಿಸುವಂತೆ ಸೂಚಿಸಲಾಗಿರುತ್ತದೆ.

ಪ್ರಸ್ತುತ, ಕೆ.ಇ.ಆರ್.ಸಿ ಯ 18.05.2018 ರಂದು ದರಗಳನ್ನು ನಿಗದಿಪಡಿಸಿದ್ದು, ದಿನಾಂಕ: 01.04.2018 ರಿಂದ 31.03.2019 ರವರೆಗೆ ಮಾಡಿಕೊಳ್ಳುವ ವಿದ್ಯುತ್ ಖರೀದಿ ಒಪ್ಪಂದಗಳ ಸ್ಥಾವರಗಳಿಗೆ ಅನ್ವಯಿಸುತ್ತದೆ, ಹಾಗೂ ಸೌರಶಕ್ತಿ ಘಟಕದ ಸಾಮರ್ಥ್ಯವು Sanctioned Load ನ ಸಾಮರ್ಥ್ಯಕ್ಕೆ ಸಮವಿರಬೇಕೆಂದು ಸೂಚನೆ ನೀಡಲಾಗಿರುತ್ತದೆ ಮತ್ತು ಗೃಹಬಳಕೆ, ಹಾಸ್ಪಿಟಲ್ಸ್ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ Gross Metering ಅಥವಾ Net Metering ಆಯ್ಕೆ ಮಾಡಿಕೊಳ್ಳುವ ಅವಕಾಶವಿದ್ದು, ಇತರೆ ಉಳಿದ ಸ್ಥಾವರಗಳಿಗೆ Net Metering ಮಾತ್ರ ಅಳವಡಿಸಿಕೊಳ್ಳುವ ಅವಕಾಶವಿರುತ್ತದೆ.

ಪ್ರತ್ಯೇಕ (Individual) ಸೌರ ಮೇಲ್ಛಾವಣಿ ಸ್ಥಾವರಗಳಿಗೆ ಈ ಕೆಳಕಂಡಂತೆ ದರಗಳನ್ನು ವಿಧಿಸಲಾಗಿರುತ್ತದೆ:

- ಸಬ್ಸಿಡಿ ಪಡೆಯುವ ಸ್ಥಾವರಗಳಿಗೆ:ರೂ.2.67/-
- ಸಬ್ಸಿಡಿ ಪಡೆಯದ ಸ್ಥಾವರಗಳಿಗೆ: ರೂ.3.56/-

ಬಹುಮಹಡಿ ಕಟ್ಟಡಗಳಲ್ಲಿ ಅಳವಡಿಸುವ ಒಂದಕ್ಕಿಂತ ಹೆಚ್ಚಿನ ಸೌರ ಮೇಲ್ಛಾವಣಿ ಸ್ಥಾವರಗಳಿಗೆ ಈ ಕೆಳಕಂಡಂತೆ ದರಗಳನ್ನು ವಿಧಿಸಲಾಗಿರುತ್ತದೆ:

- ಸಬ್ಸಿಡಿ ಪಡೆಯುವ ಸ್ಥಾವರಗಳಿಗೆ ರೂ.2.403/-

ಸಬ್ಸಿಡಿ ಪಡೆಯದ ಸ್ಥಾವರಗಳಿಗೆ ರೂ.3.204/-

ಸಂಖ್ಯೆ: ಎನರ್ಜಿ 63 ಇಬಿಎಸ್ 2019

(ಹೆಚ್.ಡಿ.ಕುಮಾರಸ್ವಾಮಿ)

ಮುಖ್ಯಮಂತ್ರಿ